Misc. No. 9/2024
PW 01 (Nagaraja)

ದಿನಾಂಕಃ 15.09.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ಎದುರುದಾರರ ಪರ – ಶ್ರೀ BNS ವಕೀಲರಿಂದ.

ನಮ್ಮ ದಾವೆ ವಜಾ ಆದ ಕಾರಣ ಈ ಅರ್ಜಿಯನ್ನು ಸಲ್ಲಿಸಿರುತ್ತೇನೆ. ಸದರಿ ದಾವೆಯಲ್ಲಿ ನಾನು 2017 ರಿಂದ ವಜಾಗೊಳ್ಳುವವರೆಗೆ ಒಂದು ಬಾರಿಯೂ ನಾನು ನ್ಯಾಯಾಲಯಕ್ಕೆ ಹಾಜರಾಗಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಗೈರು ಹಾಜರಿಗೆ ಯಾವುದೇ ಸಕಾರಣ ಇಲ್ಲ ಎಂದರೆ ಸರಿಯಲ್ಲ. ನಾನು ವಾಹನದಿಂದ ಬಿದ್ದು ಗಾಯವಾಗಿದೆ ಎಂದು ಹೇಳಿದ್ದು, ಆ ಬಗ್ಗೆ ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿರುವ ದಾಖಲಾತಿಗಳು ನನಗೆ ಸಂಬಂಧವಿಲ್ಲ, ನನ್ನ ತಂದೆಗೆ ಸಂಬಂಧಪಟ್ಟಿವೆ ಎಂದರೆ ಸರಿಯಲ್ಲ.

ನಾನು ದಾವಾ ವಜಾಗೊಂಡ ದಿನ ಯಾವುದೇ ಸಕಾರಣ ಇಲ್ಲದೇ ನ್ಯಾಯಾಲಯಕ್ಕೆ ಹಾಜರಾಗಿರುವುದಿಲ್ಲ ಎಂದರೆ ಸರಿಯಲ್ಲ. ಆದ ಕಾರಣ ದಾವಾ ವಜಾಗೊಂಡಿರುವುದು ಸರಿ ಇದೆ, ನನಗೆ ದಾವೆ ನಡೆಸಲು ಆಸಕ್ತಿ ಇಲ್ಲ ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿರುವ ತಜ್ಞರ ತಪಾಸಣೆ ಚೀಟಿ ದಾವೆ ವಜಾಗೊಂಡ ನಂತರ ದಿನಾಂಕಕ್ಕೆ ಸಂಬಂಧಪಟ್ಟಿದ್ದು ಎಂದರೆ ನಾನು ಅದಕ್ಕೂ ಮುಂಚೆ ಚಿಕಿತ್ಸೆ ಪಡೆಯುತ್ತಿದ್ದೆ. ಅದು ನನ್ನ ತಂದೆಗೆ ಸಂಬಂಧಪಟ್ಟ ಚೀಟಿ ಎಂದರೆ ಹೌದು. ನಾನು ಹಾಜರುಪಡಿಸಿರುವ ಚೀಟಿಗಳು ದಿಃ 07.11.2024 ಕ್ಕೆ ಸಂಬಂಧಪಟ್ಟಿಲ್ಲ ಎಂದರೆ ಸರಿಯಲ್ಲ. ನಾನು ಅಸಲು ದಾವೆ 151/17 ರ ಆದೇಶ ಪುಟವನ್ನು ಹಾಜರುಪಡಿಸಿದ್ದು ದಿಃ 07.11.2024 ರ ಆದೇಶ ಪುಟದಲ್ಲಿ ನನ್ನ ಸಹಿ ಇಲ್ಲ ಎಂದರೆ ಇದೆ. ನಾನು ಬರದೇ ಇರುವ ಕಾರಣ ನನ್ನ ದಾವೆ ವಜಾಗೊಂಡಿದೆ ಎಂದರೆ ನಾನು ಆ ದಿನ ಬಂದಿದ್ದೆ. ನಾನು ದಾವೆಗೆ ಅನೇಕ ಬಾರಿ ಗೈರು ಹಾಜರಿದ್ದು, ಆ ದಿನವು ಸಹ ಗೈರು ಹಾಜರು ಇದ್ದು, ದಾವೆ ಸರಿ ಇದೆ ಎಂದರೆ ಸರಿಯಲ್ಲ.

ಪಾಟೀ ಸವಾಲು ಮುಕ್ತಾಯ.

ಮರು ವಿಚಾರಣೆ ಇಲ್ಲ.

(ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ.,

ಕೂಡ್ಲಿಗಿ.